

ಪಟ ತೆಗೆದು ಮನೆಗೆ ಬಂದವನೆ ಅವನಾಡಿದ ಮಾತುಗಳ ಪರಿಶೀಲಿಸುತ್ತಾ ಹೋದೆ. ವೈಟ್ ಸ್ಟಾರ್ಕ್ ಹಕ್ಕಿಯ ಬದುಕಿನ ಬಗ್ಗೆ ತಿಳಿಯತೊಡಗಿದೆ. ಆತ ಹೇಳಿದ್ದು ನಿಜವಾಗಿತ್ತು. ಈ ಪಕ್ಷಿಯ ಜೀವನ ನಿಜಕ್ಕೂ ವಿಸ್ಮಯವಾಗಿತ್ತು. ಜೀವನಪರ್ಯಂತ ಒಂದೇ ಸಂಗಾತಿಯ ಜೊತೆ ಪ್ರಾಮಾಣಿಕ ಬಾಳುವೆ ಮಾಡುವ ಈ ಬೆಳ್ಳಕ್ಕಿಯ ಕಥೆ ತುಂಬಾ ರೋಚಕತೆ ಹುಟ್ಟಿಸಿತು. ಯುರೋಪಿನ ಜನ ಈ ಹಕ್ಕಿ ತಮ್ಮ ಸುತ್ತಮುತ್ತ ವಾಸಿಸುವುದನ್ನು ಶುಭ ಶಕುನವೆಂದು ಈಗಲೂ ಭಾವಿಸುತ್ತಾರೆ. ಅದರಲ್ಲೂ ಇಂಗ್ಲೆಂಡಿನ ಜನ ತಮ್ಮ ನೆಲದಲ್ಲಿ ಈ ಕೆಂಪು ಮೂತಿಯ ಈ ಚೆಲುವ ಜೀವವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಏನಾದರೂ ಮಾಡಿ. ಈ ಹಕ್ಕಿಯ ಮನವನ್ನು ಸಂತೈಸಿ, ತಮ್ಮ ದೇಶದಲ್ಲಿ ಇದು ತಂಗುವಂತೆ ಮಂಡಿಯೂರಿ ಅಂಗಲಾಚುತ್ತಿದ್ದಾರೆ. ಸಾವಿರದ ಇನ್ನೂರು ಎಕರೆ ಕಾಡನ್ನು ಇದರ ಉಳಿಕೆಗಾಗಿ ಮೀಸಲಿಟ್ಟಿದ್ದಾರೆ.

ಈ ಖಗ ಆರುನೂರು ವರ್ಷಗಳಿಂದ ಯು.ಕೆ. ದೇಶದಲ್ಲಿ ಗೂಡು ಕಟ್ಟಿ ಮರಿ ಮಾಡುವುದನ್ನು ಬಿಟ್ಟಿದೆಯಂತೆ. ರೈತರ ಮಿತ್ರನಾಗಿದ್ದ ಈ ಹಕ್ಕಿಗೆ ರಾಸಾಯನಿಕ ಬಳಸುವ ಹೊಲಗದ್ದೆಗಳಿಂದ ಅಪಾಯ ಉಂಟಾಯಿತು. ಇದಕ್ಕೆ ಬೇಕಾದ ಮೀನು, ಕಪ್ಪೆಗಳು, ಕೀಟಗಳು, ಸರೀಸೃಪಗಳು ಇಲ್ಲವಾದವು. ಆಹಾರದಲ್ಲಿ ನಂಜು ಹೆಚ್ಚಾಗಿ ಇದರ ಮರಿಗಳು ಪರಿಪೂರ್ಣವಾಗಿ ಬೆಳೆಯುವ ಮೊದಲೇ ಸತ್ತು ಹೋಗುತ್ತಿದ್ದವು. ಈ ಜಾಗ ತನಗೆ ಸೂಕ್ತವಲ್ಲ ಎಂಬುದು ಈ ಹಕ್ಕಿಗೆ ಅರಿವಾಗಿ ಸಂತಾನಾಭಿವೃದ್ಧಿಗೆ ಇತರೆ ದೇಶಗಳತ್ತ ಮುಖಮಾಡಿ ಹೊರಟಿತು. ಈ ವಿಷಯ ಇಂಗ್ಲೆಂಡ್ ಪಾಲಿಗೆ ಆಘಾತಕಾರಿ ಎನಿಸಿತು. ಇವುಗಳನ್ನು ಏನಾದರೂ ಮಾಡಿ ತಮ್ಮ ದೇಶದಲ್ಲೇ ಇರುವಂತೆ ಮಾಡಲು ಇಲ್ಲಿನ ವಿಜ್ಞಾನಿಗಳು ಕಳೆದ ಮೂವತ್ತು ವರ್ಷಗಳಿಂದ ಸಾಹಸ ಪಡುತ್ತಿದ್ದಾರೆ. ವೈಟ್ ಸ್ಟಾರ್ಕ್ ಪಕ್ಷಿಗೆ ಸ್ಫೂರ್ತಿ ನೀಡುವ ಪರಿಸರವನ್ನು, ಆಹಾರ ನೆಲೆಗಳನ್ನು, ತಂಪಾದ ಕಾಡನ್ನು, ನೀರಿನ ನೆಲೆಗಳನ್ನು ಮರು ಸೃಷ್ಟಿಸುತ್ತಿದ್ದಾರೆ. ಮುನಿಸಿಕೊಂಡು ಹೊರಟೇ ಹೋಗುತ್ತಿದ್ದ ಇವುಗಳನ್ನು ಬೇರೆ ದೇಶಗಳಿಂದ ಹಿಡಿದು ತಂದು ದಮ್ಮಯ್ಯ ದತ್ತಯ್ಯ ಇಲ್ಲೇ ಇದ್ದು ಮರಿ ಹಾಕಿ ಪ್ಲೀಸ್ ಎಂದು ಕೋರಿಕೊಳ್ಳುತ್ತಿದ್ದಾರೆ. ಬಿಲಿಯನ್ ಗಟ್ಟಲೆ ಹಣ ಖರ್ಚು ಮಾಡಿ ಹಕ್ಕಿಗಳ ವಾಸ ಯೋಗ್ಯ ಹಳ್ಳಿಗಳನ್ನು ಅಲ್ಲಲ್ಲಿ ಸ್ಥಾಪಿಸುತ್ತಿದ್ದಾರೆ. ಇದು ಅಚ್ಚರಿ ಎನಿಸಬಹುದು. ಪೊಳ್ಳು ಕಥೆ ಇರಬಹುದೆಂಬ ಗುಮಾನಿ ಬರಬಹುದು. ಆದರೆ ಒಪ್ಪಲೇಬೇಕಾದ ನಿಜ ಸಂಗತಿಯಿದು. ಈ ಹಕ್ಕಿ ದೇಶ ಬಿಟ್ಟು ಹೋಗಿದ್ದಕ್ಕೆ ಇಲ್ಲಿನ ಪರಿಸರಕ್ಕಾದ ನಷ್ಟದ ಅಂದಾಜು ಭರಿಸಲಾಗದ್ದು.

ಇದಕ್ಕಿಂತ ಹೃದಯಕ್ಕೆ ಹಿತವೆನಿಸುವ ಕಥೆಯೊಂದು